Affairs of the Taluk Development Board, Shikaripura, Shimoga District.

1126. SRI K. YENKATAPPA (Shikaripur).—Will the Minister for Rural Development and Panchayati Raj be pleased to state :—

(a) whether the resolutions passed in the meetings of the Taluk Development Board, Shikaripur held on 28th August 1978, 29th August 1978, 30th August 1978 and 1st March 1979 have come to the the notice of the Government;

(b) the action taken so far on the resolutions of the said dates regarding misappropriation, violation of Government rules and abuse of power, if noticed by the Government?

SRI K. PRABHAKAR (Minister for Rural Development and Panchayati Raj).—

(a) Yes.

(b) An enquiry has been conducted by the Special Deputy Commissioner, Shimoga in this regard. As per this report there is *prima facie* case in respect of four charges. He has also recommended that suitable action should be taken. After the receipt of audit report of the accounts for the year 1978–79, disciplinary action will be taken; if necessary.

ಶ್ರೀ ಕೆ. ಯಂಕಟಪ್ಪ.—ನಾನು ನನ್ನ ಪ್ರಶ್ನೆಯಲ್ಲಿ ಶಿಕಾರಿಪುರದ ತಾಲ್ಲೂಕು ಅಭಿವೃದ್ಧಿ ಮಂಡಳಿಯಲ್ಲಿ ದಿನಾಂಕ ೨೮ನೇ ಆಗಸ್ಟ್ ೧೯೭೮, ೨೯ನೇ ಆಗಸ್ಟ್ ೧೯೭೮ ಮತ್ತು ೧ನೇ ಮಾರ್ಚ್ ೧೯೭೯ ಆದಂಥಹ ತೀರ್ಮಾನಗಳು ಏನು ಎಂದು ಕೇಳಿದ್ದೇನೆ. ತಮ್ಮ ಉತ್ತರದಲ್ಲಿ ೧ನೇ ಮಾರ್ಚ್ ೧೯೭೯ರಲ್ಲಿ ಎಂದು ಪ್ರಿಂಟ್ ಮಾಡಲಾಗಿದೆ. ಬಹುಶಃ ಪ್ರಿಂಟಿಂಗ್ ಮಿಸ್ಟೇಕ್ ಇರಬಹುದು, ಸರಿಯಾದ ದಿನಾಂಕ ಯಾವುದು ತಿಳಿಸುತ್ತೀರಾ ?

† ಶ್ರೀ ಕೆ. ಪ್ರಭಾಕರ್.—೧ನೇ ಮಾರ್ಚ್ ೧೯೭೯.

ಶ್ರೀ ಕೆ. ಯಂಕಟಪ್ಪ.—ಜಿಲ್ಲಾ ವಿಶೇಷ ಜಿಲ್ಲಾಧಿಕಾರಿಗಳು ಈ ತಾಲ್ಲೂಕು ಅಭಿವೃದ್ಧಿ ಮಂಡಳಿಯಲ್ಲಿ ನಡೆದಂಥ ಅವ್ಯವಹಾರಗಳನ್ನು, ಹಣದ ದುರುಪಯೋಗ ಮತ್ತು ಕಾನೂನು ಉಲ್ಲಂಘನೆಯಾಗಿರುವ ಎಲ್ಲಾ ತೀರ್ಮಾನಗಳನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಇವರನ್ನು ದುರುಪಯೋಗದ ಬಗ್ಗೆ ತನಿಖೆ ಮಾಡಲು ನೇಮಕ ಮಾಡಿರುವಾಗ ತಮ್ಮ ಉತ್ತರದಲ್ಲಿ ಮೇಲ್‌ನೋಟಕ್ಕೆ ಎಂದು ಹೇಳಿದ್ದೀರಿ. ಇನ್ನು ಹೊರನೋಟ ಎಂದರೇ ಏನು ಸ್ವಾಮಿ ?

ಶ್ರೀ ಕೆ. ಪ್ರಭಾಕರ್.—ಪ್ರೈಮಾ ಫೇಸಿ ಎನ್ನತಕ್ಕದ್ದೇ ಮೇಲ್ನೋಟ. ಕೂಲಂಕುಷವಾಗಿ ಪರೀಕ್ಷೆ ಮಾಡಿ ಏನು ಫಲಿತಾಂಶ ಬರುತ್ತದೆಯೋ ಅದಕ್ಕೆ ಬಳಿನೋಟ ಎಂದು ಹೇಳುತ್ತೇನೆ.

ಶ್ರೀ ಕೆ. ಯಂಕಟಪ್ಪ.—ಹಾಗಿದ್ದರೆ ಸರ್ಕಾರದವರು ಬರೀ ಮೇಲ್ನೋಟಕ್ಕೆ ಮಾತ್ರ ಇವರನ್ನು ನೇಮಕ ಮಾಡಿದ್ದಾರೆ ಎಂದು ನಾವು ಭಾವಿಸಬಹುದೇ ?

ಶ್ರೀ ಕೆ. ಪ್ರಭಾಕರ್.— ಯಾರು ಎನ್‌ಕ್ವೈರಿ ಮಾಡುವುದಕ್ಕೆ ನೇಮಿಸಿದರೂ ಸಹ ಮೊಟ್ಟ ಮೊದಲು ಕಣ್ಣಿಗೆ ಕಂಡಂಥ ವಿಚಾರಗಳನ್ನು, ಪ್ರೈಮಾ ಫೇಸಿ, ಆಸ್ ಐ ಕಂಡ್ ಸಿ, ಎನ್ನುವುದನ್ನು ಅವರು ಹಾಗೆ ಹೇಳಿದ್ದಾರೆ.

ಶ್ರೀ ಕೆ. ಯಂಕಟಪ್ಪ.— ವಿಶೇಷ ಜಿಲ್ಲಾಧಿಕಾರಿಗಳನ್ನು ಇದರ ಬಗ್ಗೆ ನೇಮಕ ಮಾಡಿರತಕ್ಕದ್ದು ಮೇಲ್ನೋಟಕ್ಕೋ ಅಥವಾ ಒಳನೋಟಕ್ಕೋ ?

ಶ್ರೀ ಕೆ. ಪ್ರಭಾಕರ್.—ಇದು ಹೆಚ್ಚಾಗಿ ಮೆಲ್ನೋಟಕ್ಕೆ, ಸ್ವಲ್ಪ ಭಾಗ ಮಾತ್ರ ಹೊರನೋಟಕ್ಕೆ.

ಶ್ರೀ ಕೆ. ಯಂಕಟಪ್ಪ.—ಹಾಗಾದರೆ, ಮೇಲ್ನೋಟದಲ್ಲಿ, ಒಳನೋಟದಲ್ಲಿ ಏನೇನು ಹೊರಗೆಬಂದಿದೆ ಎಂದು ಹೇಳುತ್ತೀರಾ ? ಮೇಲ್ನೋಟಕ್ಕೆ ಬಾರದೆ ಇರುವುದು ಯಾವ ಯಾವುದು ಎಂದು ಹೇಳುತ್ತೀರಾ?

ಶ್ರೀ ಕೆ. ಪ್ರಭಾಕರ್,—ಮೇಲ್ನೋಟದಲ್ಲಿ ನಮಗೆ ಕಂಡುಬಂದಿರುವ ಪ್ರಕಾರ ಮಿಸ್ ಅಪ್ರೊಪಿ, ಯೇಷನ್ ಆಫ್ ಪವರ್, ಡಿನೆಯಲ್ ಆಫ್ ಫೆಸಿಲಿಟೀಸ್ ಟು ದಿ ಡಿಸರ್ವಿಂಗ್ ಪೀಪಲ್ ಫೇವರಿಂಗ್ ಸಂ ಪೀಪಲ್, ಆಂಡ್ ಲೀವಿಂಗ್‌ಸಂ ಪೀಪಲ್ ಎಂದು ಇದೆ.

ಶ್ರೀ ಕೆ. ಯಂಕಟಪ್ಪ.—ಹಾಗಾದರೆ ಯಾವು ಯಾವುದನ್ನು ಬೇರೆ ಬೇರೆ ರೀತಿಯಲ್ಲಿ ಮಾಡಿದ್ದಾರೆ ಎನ್ನುವುದನ್ನು ವಿವರವಾಗಿ ಹೇಳುತ್ತೀರಾ ?

ಶ್ರೀ ಕೆ. ಪ್ರಭಾಕರ್.—ಮೇಲ್ನೋಟದಲ್ಲಿ ನಾವು ವಿವರಣೆಗೆ ಹೋಗುವ ಹಾಗಿಲ್ಲ.

ಶ್ರೀ ಕೆ. ಯಂಕಟಪ್ಪ.—ಮೇಲ್ನೋಟದಲ್ಲಿ ನಾವು ವಿವರಣೆಗೆ ಹೋಗುವ ಹಾಗಿಲ್ಲದಿದ್ದರೆ ಒಳನೋಟದಲ್ಲಿರುವ ಗತಿ ಏನು ಸ್ವಾಮಿ ?

ಶ್ರೀ ಕೆ. ಪ್ರಭಾಕರ್.—ಒಳನೋಟದಲ್ಲಿ ಜನ ಏನು ಹೇಳುತ್ತಾರೋ ಹಾಗೆ ನಾವು ಆಂತೀವಿ.

ಶ್ರೀ ಕೆ. ಯಂಕಟಪ್ಪ.—ನಾನು ಕೇಳಿರತಕ್ಕ ಪ್ರಶ್ನೆಗೆ ಸರಿಯಾದ ಉತ್ತರ ಮಾನ್ಯಮಂತ್ರಿಗಳಿಂದ ಬರುತ್ತಿಲ್ಲ. ನಾಲ್ಕು ವಿಷಯಗಳನ್ನು ಮಂತ್ರಿಗಳು ಹೇಳಿದ್ದಾರೆ. ಅವುಗಳ ಬಗ್ಗೆ ಮಾನ್ಯಮಂತ್ರಿಗಳು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಕೆ. ಪ್ರಭಾಕರ್.—ಜಿಲ್ಲಾಧಿಕಾರಿಗಳು ಎನ್‌ಕ್ವೈರಿ ಮಾಡಿ ಪ್ರೈಮಾಫೇಸಿ ಬಗ್ಗೆ ಹೇಳಿದ್ದಾರೆ. ಮುಂದಿನ ಕ್ರಮ ತೆಗೆದುಕೊಳ್ಳತಕ್ಕದ್ದು ಎಂದು ಅವರು ಬರೆದಿದ್ದಾರೆ. ಮುಂದಿನ ಕ್ರಮ ತೆಗೆದುಕೊಳ್ಳುವಾಗ ಸಂಬಂಧಪಟ್ಟ ತೀರ್ಮಾನವನ್ನು ದೃಷ್ಟಿಯಲ್ಲಿಟ್ಟುಕೊಂಡು ತಾವು ಹೇಳುವುದನ್ನೂ ಲೆಕ್ಕಕ್ಕೆ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಯಂಕಟಪ್ಪ.—ರೆಸಲ್ಯೂಷನ್‌ನಲ್ಲಿ ಏನು ತೀರ್ಮಾನವಾಗಿದೆ ಎನ್ನುವುದೇ ನನ್ನ ಪ್ರಶ್ನೆ ? ಮಾನ್ಯಮಂತ್ರಿಗಳು ದಯವಿಟ್ಟು ಫೈಲ್ ನೋಡಿ ಉತ್ತರ ಹೇಳಬೇಕು. ರೆಸಲ್ಯೂಷನ್ ಏನು ಇದೆ ಎನ್ನುವುದರ ಬಗ್ಗೆ ವಿವರಬೇಕು.

ಶ್ರೀ ಕೆ. ಪ್ರಭಾಕರ್.—ನಾನಾಗಲೇ ಇದಕ್ಕೆ ಉತ್ತರ ಹೇಳಿದ್ದೇನೆ.

ಶ್ರೀ ಕೆ. ಯಂಕಟಪ್ಪ,—ತಾವು ಕೊಟ್ಟಿರತಕ್ಕ ಉತ್ತರವಾದರೂ ಏನು ?

ಶ್ರೀ ಕೆ. ಪ್ರಭಾಕರ್.—ಒಂದನೆಯಿದು, ಮಾಲ್ ಪ್ರಾಕ್ಟೀಸ್, ಮಿಸ್ ಅಪ್ರೊಪ್ರಿಯೇಷನ್ಸ್ ಆಫ್ ಫಂಡ್ಸ್, ಡಿನೆಯಲ್ ಆಫ್ ಫಸಿಲಿಟೀಸ್ ಟು ದಿ ಡಿಸರ್ವಿಂಗ್ ಫೇವರಿಂಗ್ ಸಂ ಪೀಪಲ್.

ಶ್ರೀ ಕೆ. ಯಂಕಟಪ್ಪ.—ಇದರ ಆಡಿಟ್ ವರದಿ ಬಂದಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ ? ಮೇಲ್ನೋಟಕ್ಕೆ ಬಂದಿರುವ ವಿಷಯಗಳು ಏನು ಇವೆ, ಅವು ಆಡಿಟ್ ವರದಿಗೆ ಸರಿ ಹೋಗುತ್ತವೆಯೇ ಅಥವಾ ಬೇರೆ ರೀತಿಯ ಎನ್‌ಕ್ವೈರಿ ಮಾಡಿಸುತ್ತೀರಾ ?

ಶ್ರೀ ಕೆ. ಪ್ರಭಾಕರ್.—ಆಡಿಟ್ ವರದಿಯ ಪ್ರಕಾರ ಏನು ತಪ್ಪು ಎಂದು ಸಾಬೀತಾಗುತ್ತದೆಯೋ ಆ ದೃಷ್ಟಿಯಿಂದ ಈ ವಿಷಯಗಳನ್ನು ಲೆಕ್ಕಚಾರ ಮಾಡಿ ಕ್ರಮ ತೆಗೆದುಕೊಳುತ್ತೇವೆ.